**ಕರ್ನಾಟಕ ಸರ್ಕಾರ**

ನಂ. ಗ್ರಾಅಪ 20 ಗ್ರಾಪಂಕಾ 2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 06.03.2014

ಇಂದ,

ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

ಇವರಿಗೆ,

ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್‌ಗಳು.

ಮಾನ್ಯರೇ,

**ವಿಷಯ:** ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ಮತ್ತ ಗ್ರೇಡ್-2 ವೃಂದದ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ/20/ಗ್ರಾಪಂಕಾ/2014, ದಿನಾಂಕ: 23.01.2014.

*-*-*-*-*

ಮೇಲ್ಕಂಡ ವಿಷಯ ಮತ್ತು ಉಲ್ಲೇಖದ ಕಡೆಗೆ ಗಮನ ಸೆಳೆಯಲಾಗಿದೆ. ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ಮತ್ತು ಗ್ರೇಡ್-2 ವೃಂದದ ನೇರ ನೇಮಕಾತಿ ಕೋಟಾದಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ ಶೇ.50 ರಷ್ಟು ಹುದ್ದೆಗಳನ್ನು ಕಾಯ್ದಿರಿಸಿಕೊಂಡು ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಮತ್ತು ರೋಸ್ಟರ್ ಪಾಲಿಸಿಕೊಂಡು ನಿಯಮಾನುಸಾರ ಕ್ರಮವಹಿಸುವಂತೆ ಹಾಗೂ ಮುಂದೆ ನಿವೃತ್ತಿ, ಬಡ್ತಿ, ಇತ್ಯಾದಿ ಕಾರಣಗಳಿಂದ ತೆರವಾಗುವ ಹುದ್ದೆಗಳನ್ನು ಈಗಾಗಲೇ ಶೇ.50 ರ ನೇರನೇಮಕಾತಿ ಕೋಟಾದಡಿ ನೇಮಕಾತಿ/ಬಡ್ತಿ ಮಾಡಿರುವ ಹುದ್ದೆಗಳಿಗೆ ಸರಿದೂಗಿಸಿಕೊಳ್ಳತಕ್ಕದ್ದು, ಈ ರೀತಿ ಸರಿದೂಗಿಸಿಕೊಳ್ಳದ ಹೊರತು ಹೆಚ್ಚುವರಿಯಾಗಿ ಬಡ್ತಿಗಳನ್ನು ನೀಡಬಾರದು, ಈ ಪ್ರಕ್ರಿಯೆಯನ್ನು ಪ್ರಾರಂಭಿಸಿ ದಿನಾಂಕ: 28.02.2014 ರೊಳಗೆ ಬಡ್ತಿಗಳನ್ನು ನೀಡಲು ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿಗಳಿಗೆ ಸೂಚಿಸಲಾಗಿತ್ತು. ತಮಗೆ ನೀಡಿರುವ ಕಾಲಾವಧಿಯು ಮುಕ್ತಾಯವಾಗಿರುತ್ತದೆ.

ಆದುದರಿಂದ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ಮತ್ತು ಗ್ರೇಡ್-2 ವೃಂದದ ನೇರ ನೇಮಕಾತಿ ಕೋಟಾದಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ ಶೇ.50 ರಷ್ಟು ಹುದ್ದೆಗಳನ್ನು ಕಾಯ್ದಿರಿಸಿಕೊಂಡು, ನೇಮಕಾತಿ/ಬಡ್ತಿ ನೀಡಿ ಸರಿದೂಗಿಸಿಕೊಂಡಿರುವ ಬಗ್ಗೆ ಅಂದರೆ ಆಯಾವೃಂದಗಳಲ್ಲಿ ನೇರನೇಮಕಾತಿಯ ಹುದ್ದೆಗಳು ಎಷ್ಟಿರಬೇಕೋ ಅಷ್ಟು ಹುದ್ದೆಗಳು ಖಾಲಿಯಿರುವಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಸರ್ಕಾರದ ಗಮನಕ್ಕೆ ತರದ ಹೊರತು ಸದರಿ ವೃಂದದ ಹುದ್ದೆಗಳಿಗೆ ನೇಮಕಾತಿ/ಬಡ್ತಿ ನೀಡಲು ಕ್ರಮವಹಿಸಬಾರದು ಎಂದು ತಮಗೆ ತಿಳಿಸಿದೆ.

ತಮ್ಮ ವಿಶ್ವಾಸಿ,

6/3/14

**(ಕೆ. ಯಾಲಕ್ಕಿಗೌಡ)**
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ